ಎಸ್.ಶ್ರೀಧರ್, ಬೆಂಗಳೂರು

*ದೌರ್ಜನ್ಯ ಎಂದರೇನು?*



ಊಟಕ್ಕೆ ಕುಳಿತಿರುವಾಗ ಟಾಯ್ಲೆಟ್ ಕ್ಲೀನ್ ಮಾಡುವ ಜಾಹೀರಾತು ತೋರಿಸುವುದು!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ

*ಸಿಟಿ ಬಸ್ಸಿಗೂ, ಪಕ್ಷದ ಕಚೇರಿಗೂ ಏನು ವ್ಯತ್ಯಾಸ?*

ಸಿಟಿ ಬಸ್ಸಿನಲ್ಲಿ ದಿನಾ ಎಲ್ಲರಿಗೂ ಟಿಕೆಟ್ ಸಿಗುತ್ತದೆ, ಪಕ್ಷದ ಕಚೇರಿಯಲ್ಲಿ ಚುನಾವಣೆಯ ಸಮಯದಲ್ಲಿ, ಕೆಲವರಿಗೆ ಮಾತ್ರ ಟಿಕೆಟ್ ಸಿಗುತ್ತದೆ!

ಹೆಚ್.ಎನ್.ವಿಶ್ವನಾಥ್, ಶಿವಮೊಗ್ಗ

*ಹಮ್ ಕಾಲೇ ಹೋ ತೋ ಕ್ಯಾ ಹುವಾ ದಿಲ್ ವಾಲೇ ಹೈ ಎಂಬುದು ಗೌಡರಿಗೆ ಅನ್ವಸುತ್ತದೆಯೇ?*

ದಿಲ್ ಕಾಲಾ ಹೈ ತೋ ಕ್ಯಾ ಹುವಾ ಹಮ್ ದಲ್‌ವಾಲೇ ಹೈ ಎಂಬುದು ಅನ್ವಸುವುದಂತೆ!

ವಿದ್ಯಾ ಎನ್ ಪೈ, ಹೊನ್ನಾವರ

*ರಕ್ಷಣೆ, ಭದ್ರತೆಗಳೇಕೆ ನಾಡಿನಲ್ಲಿ ಸವಾಲಾಗುತ್ತಿವೆ?*

ಭಕ್ಷಣೆ, ಛಿದ್ರತೆ ಹೆಚ್ಚಿರುವುದರಿಂದ!

ಮಹೇಶ ಜಿ ಹೆಗಡೆ, ಹೆಗ್ಗೆ

*ತಮ್ಮ ತಪ್ಪನ್ನು ತಿದ್ದಿಕೊಳ್ಳುವ ಬದಲು ಅದನ್ನು ಬರೆದ ಪತ್ರಿಕೆಯನ್ನೇ ಹತ್ತಿಕ್ಕಲು ಹೊರಟಿರುವುದು ರಾಜಕಾರಣಿಗಳಿಗೆ ಯೋಗ್ಯವೇ?*



ಇನ್ನಾರಿಗೆ ಯೋಗ್ಯ? ಅಯೋಗ್ಯತನವೇ ರಾಜಕಾರಣಿಗಳ ಯೋಗ್ಯತೆ!

ಕೃಷ್ಣಮೂರ್ತಿ ಮನ್ನಾರ್, ಶಿರಸಿ

*ಲೋಕದಲ್ಲಿ ಹೆಣ್ಣುಗಳಿಗೇ ಕಷ್ಟಗಳೆದುರಾಗುವುದು ಏಕೆ?*

ಕಷ್ಟಗಳು ಉದಯವಾಗುವುದೇ ಗಂಡುಗಳಿಂದಾದ್ದರಿಂದ!

ಕೆ.ಜಿ.ಶೇಖರಪ್ಪ, ಸಿರಿಗೆರೆ

*ಕನ್ನಡಿಗರಲ್ಲಿ ಕನ್ನಡಾಭಿಮಾನ ರಕ್ತಗತವಾಗಬೇಕಾದರೆ ಏನು ಮಾಡಬೇಕು ಸಾರ್?*

ಭಾಷೆಗಾಗಿ ಚಂದಾ ಎತ್ತುವುದನ್ನು ಬಿಟ್ಟು ಭಾಷೆಯ ಚಂದದ ಬಗ್ಗೆ ಪ್ರಚಾರ ಹೆಚ್ಚಿಸಬೇಕು!

ಡಿ.ಎಸ್.ಪಂಕಜಸುಬ್ರಮಣ್ಯ, ಬೆಂಗಳೂರು

*ವಯಸ್ಸಾಗಿದೆ, ಕೈಯಲ್ಲಿ ಆಗುವುದಿಲ್ಲವೆಂದು ಕೆಲಸದವರನ್ನು ಇಟ್ಟುಕೊಂಡರೆ ಪ್ರಾಣಕ್ಕೇ ಸಂಚಕಾರ. ಹೀಗಾದರೆ ಹಿರಿಯರ ಗತಿ?*

ಇದೇ ಪ್ರಶ್ನೆಯನ್ನು ಹಿರಿಯರನ್ನು ತೊರೆದಿರುವ ಮಕ್ಕಳು ತಮ್ಮಲ್ಲಿ ತಾವೇ ಕೇಳಿಕೊಂಡರೆ ಪರಿಹಾರ ಲಭ್ಯ!

ನರೇಂದ್ರ ಬೆಳ್ಳೂರ್, ಮೈಸೂರು

*ರಕ್ಷಕನಿಗೂ, ಭಿಕ್ಷುಕನಿಗೂ ಏನು ವ್ಯತ್ಯಾಸ?*

ಭಿಕ್ಷಾವೃತ್ತಿ ಜನ ಎಚ್ಚರವಿರುವಾಗ, ರಕ್ಷಕನ ಕೆಲಸ ಜನ ಎಚ್ಚರದಿಂದಿಲ್ಲದಿರುವಾಗ!

ಜಿ.ವಿ.ಪ್ರಭು, ಬೆಂಗಳೂರು

*ಹೆಂಡತಿಯ ಫೋಟೋವನ್ನು ಗಂಡ ಯಾವಾಗ ಪರ್ಸ್‌ನಲ್ಲಿ ಇಟ್ಟುಕೊಳ್ಳುತ್ತಾನೆ?*

ಯಾವಾಗಲೂ! ಏನೇ ಕಷ್ಟ ಬಂದರೂ ಆ ಫೋಟೋ ನೋಡುತ್ತಾನೆ. ಅವಳ ಮುಂದೆ ಎಲ್ಲ ಕಷ್ಟಗಳೂ ಗೌಣವೆನಿಸಿ ಸಹ್ಯವಾಗುತ್ತವೆ!

ಶಿರಾಲಿ ದೀಪಕ್ ಆರ್ ಶೇಟ್, ಬೆಂಗಳೂರು

*ಕಾರ್ಯ ಆಗೋತನಕ ಕತ್ತೆಯ ಕಾಲನ್ನಾದರೂ ಹಿಡಿ ಎಂದು ಹಿರಿಯರು ಹೇಳಿದ್ದಾರೆ. ಯಾವಾಗ ಸಿಕ್ಕೀರಾ?*

ಕತ್ತೆಯ ಕಾಲು ಹಿಡಿಯಲೂ ನನ್ನ ಜೊತೆ ಬೇಕೆ? ನೀವೇ ಹೋಗಿಬನ್ನಿ ಶೇಟ್‌ಜೀ!

ಡಿ.ಎಲ್.ನಾಗರಾಜ್, ಹರಪನಹಳ್ಳಿ

*ಮನೆಯೆಂಬುದು ಹೆಣ್ಣಿಗೆ ಸೆರೆಮನೆ, ಕಾರ್ಖಾನೆ ಇದ್ದಹಾಗೆ. ಗಂಡಿಗೆ...?*

ಕಚೇರಿಯಲ್ಲಿ ನಿದ್ರೆ ಮಾಡಿ ಸುಸ್ತಾದಾಗ ಬಂದು ವಿರಮಿಸಿಕೊಳ್ಳುವ ವಿಶ್ರಾಂತಿಧಾಮ!

ಕೆ.ಮೈಥಿಲಿಕೃಷ್ಣ, ಬೆಂಗಳೂರು

*ನಮ್ಮ ರಾಜ್ಯಕ್ಕೆ ಮಹಿಳಾ ಮುಖ್ಯಮಂತ್ರಿಗಳೊಬ್ಬರು ಬಂದಾಗಲೇ ಉದ್ಧಾರ ಸಾಧ್ಯ. ಏನಂತೀರಾ?*

ಜಯಲಲಿತಾ ಬಂದಿದ್ದರಲ್ಲ! ಅದರಿಂದ ಅಲ್ಲಿಯೂ ಇಲ್ಲಿಯೂ ಏನೂ ಉದ್ಧಾರದ ಲಕ್ಷಣ ಕಾಣಲಿಲ್ಲ!

ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ

*ಆಟಂಬಾಂಬ್ ಸ್ಫೋಟಿಸಿದರೆ ಸರ್ವನಾಶ; ಬಾಲಿವುಡ್ ಸೆಕ್ಸ್‌ಬಾಂಬ್ ಸ್ಫೋಟಿಸಿದರೆ?*

ಹಲವಾರು ಪಡ್ಡೆಹುಡುಗರ ನಿದ್ರೆ ನಾಶ!

## ಬಹುಮಾನಿತ ಪ್ರಶ್ನೆ

ಎಂ.ಜಿ.ಶಿವರಾಂ, ಬೆಂಗಳೂರು

*ಕಾಂಗ್ರೆಸ್ ಗರೀಬೀ ಹಟಾವೋ ಯಾವಾಗ ಮಾಡುತ್ತದೆ?*

ಆಯಿತಲ್ಲಾ! ನಮ್ಮ ಇಡೀ ವಂಶದಿಂದಲೇ ಗರೀಬಿಯನ್ನು ಹೊರಗಟ್ಟಿದ್ದೇವೆ ಎಂದರಂತೆ ಹೈಕಮಾಂಡ್!

ಆರ್.ಕೌಶಿಕ್ ವಿಶ್ವಕರ್ಮ, ಹನುಮನಾಳು

*ಒಳ್ಳೆಯ ಡಾಕ್ಟರ್ ಎಂದರೆ ಯಾರು ಸಾರ್?*

ಸಾಹಿತ್ಯದ ಡಾಕ್ಟರೇಟ್ ಪಡೆದವನು! ಭಾಷಣದ ಹೊರತು ಆತನಿಂದ ಜನಗಳಿಗಾಗಲೀ, ದನಗಳಿಗಾಗಲೀ ಯಾವುದೇ ತೊಂದರೆ ಇರುವುದಿಲ್ಲ!

ಬಾ.ರಂ.ಸುರೇಶ್, ಶಿವಮೊಗ್ಗ

*ಹೆಂಗಸರಿಗೆ ತಾಳಿ, ಕುಂಕುಮ, ಅರಿಶಿನ ಅಮೂಲ್ಯವಾದವು. ಗಂಡಸರಿಗೆ ಏನು ಮುಖ್ಯ?*

ಹೆಂಗಸರು!

ಅಮರಯ್ಯ, ಶೋರಾಪೂರ

*ಹೃದಯವಂತನಿಗೂ, ಬುದ್ಧಿವಂತನಿಗೂ ಏನು ಅಂತರ?*

ರಿಸೆಷನ್ ಆದಾಗ ಹೃದಯವಂತ ಕಣ್ಣೀರ್ಗರೆದ, ಬುದ್ಧಿವಂತ ರಿಸೆಷನ್‌ನಲ್ಲಿ ಜೀವಿಸುವುದು ಹೇಗೆ ಎಂಬ ಪುಸ್ತಕ ಬರೆದು ಹಣ ಮಾಡಿಕೊಂಡ!

ಎಂ.ಬಿ.ಖೋದಾನಪೂರ, ಸವದತ್ತಿ

*ಮದುವೆಯಾದವರು ಕಾಲು ಜಾರಿದರೇನು ಗತಿ?*

ಬೀಳದಂತೆ ನೋಡಿಕೊಳ್ಳಲು ಸತಿ/ಪತಿ ಇರುತ್ತಾರಲ್ಲಾ ಬಿಡಿ!

ಕೆ.ಮಹಮದ್ ರಫಿ, ಕೊಟ್ಟೂರು

*ರಾಜಕೀಯ ಕ್ಷೇತ್ರಕ್ಕೆ ಧುಮುಕಲು ವಿದ್ಯಾರ್ಹತೆಯನ್ನು ಮಾನದಂಡವಾಗಿಸಿದರೆ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಕಾಣಬಹುದೆ ಸಾರ್?*

ಸಾಧ್ಯವೇ? ಹೇಳಿದವರ ಮಾನ ದಂಡವಾದೀತು ಅಷ್ಟೆ!

ಜಿ.ಸುಬ್ಬನಾಯಕ, ಬೊಮ್ಮಲಾಪುರ

*ಎಷ್ಟೋ ಕಾಲದಿಂದ ಮೂಲೆಗುಂಪಾಗಿದ್ದ ವಾಸ್ತುಶಾಸ್ತ್ರ ಇಂದು ಜನಪ್ರಿಯವಾಗುತ್ತಿರುವುದರ ಅರ್ಥವೇನು?*




ಹುಂಬರು ಈಗ ಮೊದಲಿಗಿಂತಲೂ ಹೆಚ್ಚಿರುವರೆಂದು!

■ ರಾಮ್